॥ ದೇವ ಬಂದ ನಮ್ಮ ಸ್ವಾಮಿ ಬಂದನೋ ॥

ದೇವ ಬಂದ ನಮ್ಮ ಸ್ವಾಮಿ ಬಂದನೋ ।
ದೇವರ ದೇವ ಶಿಖಾಮಣಿ ಬಂದನೋ ॥ ಪ ॥

ಉರಗಶಯನ ಬಂದ ಗರುಡಗಮನ ಬಂದ ।
ನರನಿಗೊಲಿದವ ಬಂದ ।
ನಾರಾಯಣ ಬಂದ ॥ ೧ ॥

ಮಂದರೋದ್ಧರ ಬಂದ ।
ಮಾಮನೋಹರ ಬಂದ ।
ವೃಂದಾವನಪತಿ ಗೋವಿಂದ ಬಂದ ॥ ೨ ॥

ಚಕ್ರಧರನು ಬಂದ ।
ಅಕ್ರೂರಗೊಲಿದ ತ್ರಿವಿಕ್ರಮ ಬಂದನೋ ॥ ೩ ॥

ಪಕ್ಷಿವಾಹನ ಬಂದ ।
ಲಕ್ಷ್ಮೀರಮಣ ಬಂದ ।
ಅಕ್ಷಯಫಲದಾ । ಲಕ್ಷ್ಮಣಾಗ್ರಜ ಬಂದ ॥ ೪ ॥

ಪೂತನಿಸಂಹರಣ ಬಂದ ।
ಪುರುಹೂತವಂದ್ಯ ಬಂದ ।
ಮಾತುಳನ ಮಡುಹಿದ । ಗೋವಿಂದ ಬಂದ ॥ ೫ ॥

ನಿಗಮಗೋಚರ ಬಂದ ।
ನಿತ್ಯತೃಪ್ತನು ಬಂದ ।
ನಗೆಮುಖ ಪುರಂದರ ವಿಠಲ ಬಂದನೋ ॥ ೬ ॥

http://www.yousigma.com